ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 05–12–2020

# ಮಾಧ್ಯಮ ಆಮಂತ್ರಣ

**ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ : ಬಿ.ಆರ್. ಅಂಬೇಡ್ಕರ್ ಅವರ 64 ನೇ ಪುಣ್ಯಸ್ಮರಣೆ :**

**ಪ್ರತಿಮೆಗೆ ಮಾಲಾರ್ಪಣೆ :**

ಬಿ. ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಡಾ: ಸಿ. ಎನ್. ಅಶ್ವತ್ಥ್‌ನಾರಾಯಣ್, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಲಕ್ಷ್ಮಣ್ ಎಸ್. ಸವದಿ, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಬಿ. ಶ್ರೀರಾಮುಲು, ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ದಿನಾಂಕ : 06–12–2020 ಭಾನುವಾರ ಸಮಯ : ಬೆಳಿಗ್ಗೆ 10–30 ಗಂಟೆಗೆ

ಸ್ಥಳ : ವಿಧಾನ ಸೌಧದ ಮುಂಭಾಗ, ಬೆಂಗಳೂರು

## ಕುವೆಂಪು ಕಮ್ಮಟದಲ್ಲಿ ಭಾಗವಹಿಸಲು ಆಸಕ್ತರಿಂದ ಅರ್ಜಿ ಆಹ್ವಾನ

ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):

ಕರ್ನಾಟಕ ಸಾಹಿತ್ಯ ಅಕಾಡೆಮಿಯು "ಕುವೆಂಪು ಸಾಹಿತ್ಯ ಪರಿಸರಯಾನ" ಎಂಬ ರಾಜ್ಯಮಟ್ಟದ ಮೂರು ದಿನಗಳ ಕಮ್ಮಟವನ್ನು ದಿನಾಂಕ 27-12-2020 ರಿಂದ 29-12-2020 ರವರೆಗೆ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ ಇವರ ಸಹಯೋಗದೊಂದಿಗೆ ಕುಪ್ಪಳ್ಳಿ, ಶಿವಮೊಗ್ಗ ಜಿಲ್ಲೆ ಇಲ್ಲಿ ನಡೆಸಲು ಉದ್ದೇಶಿಸಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯಿರುವ 20 ರಿಂದ 40 ವರ್ಷ ವಯೋಮಿತಿಯುಳ್ಳ ರಾಜ್ಯದ ಎಲ್ಲ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು 11-12-2020 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ **http://karnatakasahithyaacademy.org** ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ನೊಂದಾಯಿತ ಪದವೀಧರರಾಗಿ ನೊಂದಾಯಿಸಿಕೊಳ್ಳಲು ಅರ್ಜಿಗಳ ಆಹ್ವಾನ.

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):**

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದು 5 ವರ್ಷ ಪೂರೈಸಿದ ಪದವೀಧರರಿಂದ "ನೊಂದಾಯಿತ ಪದವೀಧರರಾಗಿ" ನೊಂದಾಣಿ ಮಾಡಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ ಅರ್ಜಿಗಳನ್ನು ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಗಳ ಜೊತೆಗೆ ರೂ.500/-ಗಳ ಡಿ.ಡಿ.ಯನ್ನು ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು (**Comptroller, UAS, Bangalore**) ಇವರ ಹೆಸರಿಗೆ ಪಡೆದು ದಿನಾಂಕ:31-12-2020 ರೊಳಗೆ ಕುಲಸಚಿವರ ಕಛೇರಿಗೆ ಸಲ್ಲಿಸುವುದು.

ಹೆಚ್ಚಿನ ವಿವರಗಳಿಗೆ ಕುಲಸಚಿವರ ಕಛೇರಿಯ ದೂರವಾಣಿ ಸಂಖ್ಯೆ:080-23330984 / 23330149 ಸಂಪರ್ಕಿಸುವುದು ಅಥವಾ ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uasbangalore.edu.in ನಲ್ಲಿ ಪಡೆಯಬಹುದು.

## ಸಚಿವರ ಪ್ರವಾಸ

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):**

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಅವರ **5**ನೇ ಮತ್ತು **6**ನೇ ತಾರೀಕು ಡಿಸೆಂಬರ್ **2020**ರ ಹಾಸನ ಜಿಲ್ಲಾ ಪ್ರವಾಸವನ್ನು ರದ್ದು ಪಡಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Tour programme cancelled

**Bengaluru, December 5 (Karnataka Information)**

**Minister for Food, Civil Supplies and Consumer Affairs and Hassan district incharge minister Gopalaiah Tour program to Hassan district on 5th & 6th December 2020 has been CANCELLED.**

## ದತ್ತು ಸ್ವೀಕಾರ

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):**

ಮೈಸೂರು ಮೃಗಾಲಯದ "ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ" ಅಡಿಯಲ್ಲಿ ಮೈಸೂರಿನ ನಿವಾಸಿಗಳಾದ ಬಿ.ಎನ್. ಲೀಲಾವತಿ– ಕಾಳಿಂಗ ಸರ್ಪ, ಎಚ್.ವಿ. ಅಮರನಾಥ– ಬಣ್ಣದ ನವಿಲು, ಎಚ್.ಎನ್. ವಿಶ್ವನಾಥ–ಬ್ರೌನ್ ವುಡ್ ಔಲ್, ನಿನಾದ್ ದತ್ತ– ಲವ್‌ಬರ್ಡ್ ಇವಗಳನ್ನು ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾರ್ಯಾಚರಣೆಯಾಗುತ್ತಿರುವ ಅನುಸೂಚಿಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರು ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಲು ಅವತಾರ್ ತಂತ್ರಾಂಶದಲ್ಲಿ ಅವಕಾಶ**

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಸಾರಿಗೆ ಸಂಸ್ಥೆಯಾಗಿದ್ದು, ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುರಕ್ಷಿತ ಹಾಗೂ ವಿಶ್ವಾಸಾರ್ಹ ಸಾರಿಗೆ ಸೌಲಭ್ಯವನ್ನು ಒದಗಿಸುವ ಧ್ಯೇಯವನ್ನು ಹೊಂದಿರುತ್ತದೆ. ಬೆಂಗಳೂರು ನಗರದ ವಿವಿಧ ಸ್ಥಳಗಳಿಂದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (164 ಸುತ್ತುವಳಿಗಳು) ಹಾಗೂ ಕೆಂಪೇಗೌಡ ಅಂತರಾಷ್ಟ್ರಿಯ ವಿಮಾನ ನಿಲ್ದಾಣದಿಂದ ನಗರದ ವಿವಿಧ ಸ್ಥಳಗಳಿಗೆ (171 ಸುತ್ತುವಳಿಗಳು) ಪ್ರತಿನಿತ್ಯ ಒಟ್ಟು 335 ಏಕಮುಖ ಸುತ್ತುವಳಿಗಳ ಮೂಲಕ ಹವಾನಿಯಂತ್ರಿತ **"ವಾಯುವಜ್ರ"** ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಹವಾನಿಯಂತ್ರಿತ ವಾಯುವಜ್ರ ಸೇವೆಗಳಲ್ಲಿ ಸಂಚರಿಸುವ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಲು ಕ.ರಾ.ರ.ಸಾ.ನಿಗಮದ **ಅವತಾರ್ ತಂತ್ರಾಂಶದಲ್ಲಿ** ಸೌಲಭ್ಯವನ್ನು ಕಲ್ಪಿಸಲಾಗಿದೆ.

ಮುಂಗಡ ಬುಕ್ಕಿಂಗ್ ಸೌಲಭ್ಯ ಕಲ್ಪಿಸಿರುವ ಮಾರ್ಗಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಮಾರ್ಗಸಂಖ್ಯೆ | ಎಲ್ಲಿಂದ-ಎಲ್ಲಿಗೆ | ಮಾರ್ಗ |
|---|---|---|---|
| 1 | ಕೆಐಎ-4 | ಹೆಚ್.ಎ.ಎಲ್ – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಜೀವನಭೀಮಾನಗರ ಬಸ್ ನಿಲ್ದಾಣ ಮತ್ತು ಇಂದಿರಾನಗರ ಪೋಲಿಸ್ ಸ್ಟೇಷನ್. |
| 2 | ಕೆಐಎ-4ಎ | ವೈಟ್‌ಫೀಲ್ಡ್ ಟಿ.ಟಿ.ಎಂ.ಸಿ – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಕುಂದಲ್‌ಹಳ್ಳಿ ಗೇಟ್, ಹೆಚ್‌ಎಲ್ ಮೇನ್ ಗೇಟ್, ಜೀವನಭೀಮಾನಗರ ಬಸ್ ನಿಲ್ದಾಣ ಮತ್ತು ಇಂದಿರಾನಗರ ಪೋಲಿಸ್ ಸ್ಟೇಷನ್. |
| 3 | ಕೆಐಎ-5 | ಬನಶಂಕರಿ ಟಿಟಿಎಂಸಿ – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಜೆ.ಪಿ ನಗರ 6ನೇ ಹಂತ, ಜಯನಗರ 4 ನೇ ಹಂತ ಮತ್ತು ಶಾಂತಿನಗರ ಟಿಟಿಎಂಸಿ. |
| 4 | ಕೆಐಎ-6 | ಕಾಡುಗೋಡಿ ಬಸ್ ನಿಲ್ದಾಣ– ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಕಾಡುಗೋಡಿ ಬಸ್ ನಿಲ್ದಾಣ, ವೈಟ್‌ಪಿಲ್ಡ್ ಪೋಸ್ಟ್ ಆಫೀಸ್, ಹೆಚ್‌ಎಎಲ್ ಮೇನ್ ಗೇಟ್ ಮತ್ತು ದೊಮ್ಮಲೂರು. |
| 5 | ಕೆಐಎ-8 | ಎಲೆಕ್ಟ್ರಾನಿಕ್ ಸಿಟಿ – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಎಲೆಕ್ಟ್ರಾನಿಕ ಸಿಟಿ, ಸೇಂಟ್ರಲ್ ಸಿಲ್ಕ್ ಬೋರ್ಡ್, ಇಕೋಸ್ಪೇಸ್, ಮಾರತ್‌ಹಳ್ಳಿ ಕಳಾಮಂದಿರ ಮತ್ತು ಕೆ.ಆರ್ ಪುರ್ಂ ರೈಲ್ವೆ ನಿಲ್ದಾಣ. |
| 6 | ಕೆಐಎ-8ಸಿ | ಚಂದಾಪುರ – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಎಲೇಕ್ಟ್ರಾನಿಕ ಸಿಟಿ, ಸೇಂಟ್ರಲ್ ಸಿಲ್ಕ್ ಬೋರ್ಡ್, ಇಕೋಸ್ಪೇಸ್, ಮಾರತ್‌ಹಳ್ಳಿ ಕಳಾಮಂದಿರ ಮತ್ತು ಕೆ.ಆರ್ ಪುರ್ಂ ರೈಲ್ವೆ ನಿಲ್ದಾಣ. |
| 7 | ಕೆಐಎ-9 | ಕೆಂಪೇಗೌಡ ಬಸ್ ನಿಲ್ದಾಣ – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ಮೇಖ್ರಿ ಸರ್ಕಲ್ ಮತ್ತು ಹೆಬ್ಬಾಳ. |
| 8 | ಕೆಐಎ-10 | ಮೈಸೂರು ರಸ್ತೆ ಬಸ್ ನಿಲ್ದಾಣ (ಎಂಆರ್‌ಬಿಎಸ್) – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ವಿಜಯನಗರ ಟಿಟಿಎಂಸಿ ಮತ್ತು ಯಶವಂತಪುರ ಟಿಟಿಎಂಸಿ. |
| 9 | ಕೆಐಎ-14 | ಡಿಎಲ್‌ಎಫ್ ಅಪಾರ್ಟ್‌ಮೆಂಟ್ – ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ | ರಾಯಲ್ ಮೀನಾಕ್ಷಿ ಮಾಲ್, ಜೆ.ಡಿ ಮರ / ವೆಗಾಸಿಟಿ ಮಾಲ್, ಶಾಂತಿನಗರ ಬಸ್ ಟಿಟಿಎಂಸಿ. |

**ಹೆಚ್ಚಿನ ಮಾಹಿತಿಗಾಗಿ www.ksrtc.in ಸಂಪರ್ಕಿಸುವುದು.**

<u>ಪ್ರಮುಖ ನಿಯಮಗಳು ಮತ್ತು ಷರತ್ತುಗಳು ಈ ಕೆಳಕಂಡಂತಿದೆ.</u>

- ಮುಂಗಡವಾಗಿ ಆಸನಗಳನ್ನು ಕೆಎಸ್‌ಆರ್‌ಟಿಸಿ ಬುಕ್ಕಿಂಗ್ ಕೌಂಟರ್‌ಗಳು, ಆನ್‌ಲೈನ್ (www.ksrtc.in), ಕೆಎಸ್‌ಆರ್‌ಟಿಸಿ ಮೊಬೈಲ್ ಆಪ್ ಹಾಗೂ ಅಧಿಕೃತ ಖಾಸಗಿ ಏಜೆನ್ಸಿಗಳ ಮೂಲಕ ಕಾಯ್ದಿರಿಸಬಹುದು.
- ಪ್ರಯಾಣಿಕರು ಪ್ರಯಾಣಿಸುವ ಸಮಯದಲ್ಲಿ ಚಾಲ್ತಿಯಲ್ಲಿರುವ ಮುದ್ರಿತ ಟಿಕೇಟ್/ಇ–ಟಿಕೇಟ್/ಬುಕ್ಕಿಂಗ್ ಎಸ್‌ಎಂಎಸ್, (ಮೊಬೈಲ್/ಲ್ಯಾಪ್‌ಟಾಪ್ ಇತ್ಯಾದಿಗಳ ಮೂಲಕ ತೋರಿಸುವುದು) ಹೊಂದಿರಬೇಕು.
- Online, Mobile App ಮೂಲಕ ಮುಂಗಡ ಆಸನ ಕಾಯ್ದಿರಿಸಿದ ಪ್ರಯಾಣಿಕರು ಇ–ಟಿಕೇಟ್‌ನೊಂದಿಗೆ ಭಾವಚಿತ್ರವಿರುವ ಮೂಲ ಗುರುತಿನ ಚೀಟಿ/ಪ್ರತಿಯನ್ನು {ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್, ಪಡಿತರ ಚೀಟಿ ಆಧಾರ್‌ಕಾರ್ಡ್, ಸರ್ಕಾರಿ, ಅರೆ ಸರ್ಕಾರಿ, ಮಂಡಳಿ ವಿತರಿಸಿರುವ ಗುರುತಿನ ಚೀಟಿ}, ಹಿರಿಯ ನಾಗರೀಕರ ಗುರುತಿನ ಚೀಟಿ (ಕ.ರಾ.ರ.ಸಾ ನಿಗಮ/ಸರ್ಕಾರದಿಂದ ವಿತರಿಸಿದ) ಅಥವಾ ಭಾವಚಿತ್ರವಿರುವ ಖಾಸಗಿ ಕಂಪನಿ, ಶೈಕ್ಷಣಿಕ ಸಂಸ್ಥೆಗಳಿಂದ ವಿತರಿಸಿದ ಗುರುತಿನ ಚೀಟಿಯ ಮೂಲ ಪ್ರತಿ ತೋರಿಸಿ ಪ್ರಯಾಣಿಸುವುದು.
- ಒಂದೇ ಗುಂಪಿನ 4 ಅಥವಾ ಅಧಿಕ ಪ್ರಯಾಣಿಕರು ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಿದಲ್ಲಿ, ಪ್ರಯಾಣದರದಲ್ಲಿ ಶೇ.5 ರಷ್ಟು ರಿಯಾಯಿತಿಯನ್ನು ಇ–ಬುಕ್ಕಿಂಗ್ ಸಮಯದಲ್ಲಿ ನೀಡಲಾಗುತ್ತದೆ.
- ಹೋಗುವ ಹಾಗೂ ಹಿಂದಿರುಗುವ (onward & return) ಪ್ರಯಾಣಕ್ಕೆ ಒಮ್ಮೆಲೇ ಮುಂಗಡವಾಗಿ ಆಸನವನ್ನು ಕಾಯ್ದಿರಿಸಿದಲ್ಲಿ, ಹಿಂದಿರುಗುವ ಪ್ರಯಾಣ ದರದಲ್ಲಿ ಶೇ.10 ರಷ್ಟು ರಿಯಾಯಿತಿಯನ್ನು ಇ–ಬುಕ್ಕಿಂಗ್ ಸಮಯದಲ್ಲಿ ನೀಡಲಾಗುತ್ತದೆ.

# <u>ಅವಧಿ ವಿಸ್ತರಣೆ</u>

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ 2020–21ನೇ ಶೈಕ್ಷಣಿಕ ಸಾಲಿನ ಬಿಎ/ಬಿಕಾಂ, ಎಂ.ಎ/ಎಂ.ಸಿ.ಜೆ/ಎಂ.ಕಾಂ, ಬಿ.ಎಲ್.ಐ.ಎಸ್ಸಿ, ಎಂ.ಎಸ್ಸಿ, ಪಿಜಿ ಡಿಪ್ಲೋಮಾ, ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರಥಮ ವರ್ಷದ ಪ್ರವೇಶಾತಿಯ ಅಂತಿಮ ದಿನಾಂಕವನ್ನು ಡಿಸೆಂಬರ್ 31ರ ವರೆಗೆ ವಿಸ್ತರಿಸಲಾಗಿದೆ.**

**ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಪ್ರಾದೇಶಿಕ ಕೇಂದ್ರ, ಯಲಹಂಕ, ಬೆಂಗಳೂರು. ದೂರವಾಣಿ ಸಂಖ್ಯೆ : 9880526439, 9019526439 ನ್ನು ಸಂಪರ್ಕಿಸಬಹುದು.**

## Providing advance booking facility for Vayuvajra services for the convenience of the Commuters travelling between Kempegowda International Airport and city

Bengaluru, December 5 (Karnataka Information)

BMTC is committed to provide efficient, adequate, economical transport services to the travelling public. BMTC has implemented various services and amenities for the benefit of the travelling public and has gained the encouragement and patronage from the commuters. Currently Air conditioned "Vayuvajra" services are being operated from different localities of Bengaluru city to Kempegowda International Airport (164 trips) and Kempegowda International Airport towards city (171 trips), totally with 335 single trips daily.

Advance booking facility for Air conditioned Vayuvajra services is introduced in the Awatar system of the KSRTC for the convenience of the commuters.

The route details are as below:

| Sl. No | Route Number | From-To | Via |
|---|---|---|---|
| 1 | KIA-4 | HAL Main Gate-Kempegowda international Airport. | Jeevanbheemanagar Bus Stand and Indira Nagar Police Station. |
| 2 | KIA-4A | White Field TTMC-Kempegowda international Airport. | Kundalahalli Gate, HAL Main Gate, Jeevanbheemanagar Bus Stand and Indira Nagar Police Station. |
| 3 | KIA-5 | Banashankari TTMC-Kempegowda international Airport. | J.P Nagar 6Th Phase, Jaynagar 4th Block TTMC and Shanthinagar TTMC. |
| 4 | KIA-6 | Kadugodi Bus Station-Kempegowda international Airport. | White Field. Post Office, HAL Main Gate, and Domalur TTMC. |
| 5 | KIA-8 | Electronic City-Kempegowda international Airport. | Electronic City, Central Silk Board, Eco Space, Marathahalli Kalamandir and K.R.Puram Railway Station. |
| 6 | KIA-8C | Chandapura-Kempegowda international Airport. | Electronic City, Central Silk Board, Eco Space, Marathahalli Kalamandir and K.R.Puram Railway Station. |
| 7 | KIA-9 | Kempegowda Bus Statio – Kempegowda international Airport. | Mekhri Circle and Hebbala. |
| 8 | KIA-10 | Mysore Road Bus Station (MRBS) – Kempegowda international Airport. | Vijayanagar TTMC, and Yeshwanthpura TTMC. |
| 9 | KIA-14 | DLF Apartment-Kempegowda international Airport. | Royal Meenakshi Mall, JD Mara/Vega City Mall and Shanthinagar TTMC. |

Contact www.ksrtc.in for more information.

Important -Terms and Conditions are as below.

1. Seats can be booked in advance through the KSRTC booking counters, online (www.ksrtc.in), KSRTC Mobile App and authorized franchisees.

2. Passengers must show printed ticket/e-ticket or booking SMS (through mobile/laptop etc.) along with any one of the specified identity proofs while boarding.

3. Identity proofs allowed Original/Photo copy of Driving License, Voter ID card, PAN Card, Passport, Aadhar Card, Ration Card (with passenger photo), Senior citizen ID card (issued by KSRTC/Govt.), ID card (with photo), issued by Govt. Departments. Original private company ID card (with Photo), Educational Institution ID card (with Photo),

4. Group booking discount of 5% on basic fare is allowed when four are more seats are booked as a group in single ticket.

5. Return journey discount of 10% on basic fare is allowed when both onward and return journey are booked in single transaction.

## ಸಾರಿಗೆ ಅದಾಲತ್

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):**

**ದಿನಾಂಕ 18–12–2020 ರಂದು ಮಧ್ಯಾಹ್ನ 3–00 ಗಂಟೆಗೆ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ದಕ್ಷಿಣ) ಜಯನಗರ ಇಲ್ಲಿ ಸಾರಿಗೆ ಅದಾಲತ್‌ನ್ನು ಕಚೇರಿಯ ಎರಡನೇ ಮಹಡಿಯ ಆಡಿಟೋರಿಯನಲ್ಲಿ ಏರ್ಪಡಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಳ್ಳಲು ಅಧಿಕೃತ ಪ್ರಕಟಣೆ ತಿಳಿಸಿದೆ.**

## Sarige Adalat

**Bengaluru, December 5 (Karnataka Information)**

**Sarige Adalat will be held on 18-12-2020 at 3-00 pm in the 2 nd floor, Auditorium by the office of the Deputy Commissioner for Transport and Senior Regional Transport Officer, Bangalore (South) Jayanagar . Public are**

**requested to redressal of their grievances if any in above said Adalath says official press release.**

## ಅಭಿನಂದನೆ

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):**

ಶ್ರೀ ರಂಜಿತ್‌ಸಿಂಹ ದಿಸಾಳೆ, ಶಿಕ್ಷಕರು, ಜಿಲ್ಲಾ ಪರಿಷತ್ ಶಾಲೆ, ಪರಿಟೇವಾಡಿ ಗ್ರಾಮ, ಮಾಥಾ ತಾಲ್ಲೂಕು, ಸೊಲ್ಲಾಪುರ ಜಿಲ್ಲೆ. ಮಹಾರಾಷ್ಟ್ರ ಇವರಿಗೆ ಮಹಾರಾಷ್ಟ್ರ ರಾಜ್ಯದ ಗಡಿ ಕನ್ನಡ ಪ್ರದೇಶಗಳಲ್ಲಿ ಮರಾಠಿ ಭಾಷೆಯ ಪಠ್ಯಗಳನ್ನು ಕನ್ನಡಕ್ಕೆ ಮರು ವಿನ್ಯಾಸ ಮಾಡಿದಕ್ಕೆ "ಪ್ರತಿಷ್ಠಿತ ಗ್ಲೋಬಲ್ ಟೀಚರ್ ಪುರಸ್ಕಾರ" ಕ್ಕೆ ಭಾಜನರಾಗಿರುತ್ತಾರೆ.

ಕನ್ನಡವನ್ನು ನಿಷ್ಠೆಯಿಂದ ಕಲಿತು ಈ ಶಾಲೆಯ ಮಕ್ಕಳಿಗೆ ಕನ್ನಡ ಬೋಧಿಸಿದುದು ಕನ್ನಡಿಗರೆಲ್ಲರಿಗೂ ತುಂಬಾ ಅಭಿಮಾನದ ವಿಷಯವಾಗಿದೆ ಎಂದು ಡಾ : ಸಿ. ಸೋಮಶೇಖರ್ ಅಧ್ಯಕ್ಷರು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರು ರಂಜಿತ್‌ಸಿಂಹ ದಿಸಾಳೆ ಅವರನ್ನು ಅಭಿನಂದಿಸಿದ್ದಾರೆ.

## ಸಕಾಲ ಸಪ್ತಾಹ

**ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):**

ಇಂಧನ ಇಲಾಖೆಯ ಅಡಿಯಲ್ಲಿ ಬರುವ ವಿದ್ಯುತ್ ಪರಿವೀಕ್ಷಣಾ ಇಲಾಖೆಯಲ್ಲಿ ಸರ್ಕಾರಿ ಸೇವೆಗಳನ್ನು ಒದಗಿಸುವ ಉದ್ದೇಶದಿಂದ ದಿನಾಂಕ 14-12-2020 ರಿಂದ 19-12-2020 ರವರೆಗೆ "ಸಕಾಲ ಸಪ್ತಾಹ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ. ಇಲಾಖೆಯಲ್ಲಿ 18 ಸೇವೆಗಳನ್ನು ಒದಗಿಸುವ ಉದ್ದೇಶದಿಂದ ಸಕಾಲ ಸಪ್ತಾಹ ಅವಧಿಯಲ್ಲಿ ಹೊಸದಾಗಿ ಸ್ವೀಕರಿಸುವ ಅರ್ಜಿಗಳನ್ನು ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡಿ ಬಾಕಿ ಉಳಿದಿರುವ ಅರ್ಜಿಗಳನ್ನು ವಿಲೇವಾರಿ ಮಾಡುವ ಮೂಲಕ ಸಕಾಲ ಯೋಜನೆ ಕುರಿತು ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಸಕಾಲದಡಿಯಲ್ಲಿ ಬರುವ ಇಲಾಖೆಯ 18 ಸೇವೆಗಳನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಲು ಹಾಗೂ ಇಲಾಖೆಯ ಅಧಿಕೃತ ಜಾಲತಾಣ ಮತ್ತು ಸಕಾಲ ಜಾಲತಾಣ ಅನ್ನು ಸಂಪರ್ಕಿಸುವಂತೆ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಇವರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಚೆ ಅದಾಲತ್

ಬೆಂಗಳೂರು, ಡಿಸೆಂಬರ್ 05 (ಕರ್ನಾಟಕ ವಾರ್ತೆ):

ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಗೆ ಸಂಬಂಧಪಟ್ಟ ಅಂಚೆ ಸೇವೆಗಳ ಕುಂದು ಕೊರತೆಗಳು ಅಹವಾಲುಗಳನ್ನು ಪರಿಹರಿಸಲು ಅಂಚೆ ಅದಾಲತ್(ಡಾಕ್ ಅದಾಲತ್)ನ್ನು 16ನೇ ಡಿಸೆಂಬರ್ 2020ರ ಮಧ್ಯಾಹ್ನ 3–00ಗಂಟೆಗೆ ಮೇಘದೂತ್ ಸಭಾಂಗಣ, 5ನೇ ಮಹಡಿ, ರಾಜಭವನ ರಸ್ತೆ, ಬೆಂಗಳೂರು ಜಿ.ಪಿ.ಓ., ಬೆಂಗಳೂರು–560001 ಇಲ್ಲಿ ಆಯೋಜಿಸಲಾಗಿದೆ.

ಸಾರ್ವಜನಿಕ ಅಂಚೆ ಸೇವೆಗಳ ಬಗ್ಗೆ ತಮಗಿರುವ ಕುಂದುಕೊರತೆಗಳನ್ನು ತಮ್ಮ ಸಂಪೂರ್ಣ ಹಾಗೂ ಸಂಪರ್ಕ ವಿಳಾಸದೊಂದಿಗೆ ತ್ವರಿತ ಪರಿಹಾರಕ್ಕಾಗಿ ಸಹಾಯ ನಿರ್ದೇಶಕರು, ಪೋಸ್ಟ್ ಮಾಸ್ಟರ್ ಜನರಲ್ ಕಾರ್ಯಾಲಯ, ನಂ. 1, ಅರಮನೆರಸ್ತೆ, ಬೆಂಗಳೂರು–560001 ವಿಳಾಸಕ್ಕೆ 9ನೇ ಡಿಸೆಂಬರ್ 2020 ರೊಳಗೆ ತಲುಪುವಂತೆ ಕಳುಹಿಸಿಕೊಡಲು ಕೋರಿದೆ. ಕುಂದುಕೊರತೆಗಳನ್ನು ಈಮೇಲ್ ಮುಖಾಂತರ tech.karbg@indiapost.gov.inಗೆ ಕಳುಹಿಸಬಹುದಾಗಿದೆ ಹಾಗೂ ದೂರವಾಣಿ ಸಂಖ್ಯೆ 080–22392556. ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ನಿರ್ದಿಷ್ಟ ಅಂಕಿ ಅಂಶಗಳೊಂದಿಗೆ ಕಳುಹಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.